**ಮೂಲ ದಾವಾ ನಂಃ 41/2023**

**ಪಿ ಡಬ್ಲುಃ 01**

ಸಾಕ್ಷಿಯನ್ನು ದಿನಾಂಕಃ **18.07.2025.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ.ಪಿ.ಪಿ 1 ರಿಂದ 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ದಾವಾಸ್ತಿ ಜಾಗಕ್ಕೆ ಸಂಬಂಧಿಸಿದ ಉತಾರನ್ನು ಹೊರತುಪಡಿಸಿ, ಗ್ರಾಮ ಪಂಚಾಯತಿಯವರು ಬೇರೆ ದಾಖಲೆಗಳನ್ನು ಕೊಟ್ಟಿದ್ದಾರಾ ಎಂದರೆ ಇಲ್ಲ. ನಿಪಿ.1 ಗ್ರಾಮ ಪಂಚಾಯತಿಯವರು ನೀಡಿದ ದಾಖಲೆಯಾಗಿರುವುದಿಲ್ಲ ,ಅದನ್ನು ನಾನೇ ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 2019-20 ನೇ ಸಾಲಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದರೆ ಸರಿ. ನಿಪಿ.1 ರಲ್ಲಿ ಖಾಯಂ ಮಾಡಿದ ಅಳತೆ ಎನ್ನುವ ಕಾಲಂ ಖಾಲಿ ಇದೆ ಎಂದರೆ ಸರಿ. ನಿಪಿ.1 ರಲ್ಲಿ ಮನೆ ಎಂದು ಮಾತ್ರ ನಮೂದಿಸಿದ್ದು, ಹಿತ್ತಲು ಮತ್ತು ಖುಲ್ಲಾ ಜಾಗೆಯ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ದಾವಾಸ್ತಿಯು ಪೂರ್ವ ಪಶ್ಚಿಮವಾಗಿ 200 ಅಡಿ ಮತ್ತು ದಕ್ಷಿಣ ಉತ್ತರವಾಗಿ 60 ಅಡಿ ಇದೆ ಎಂದು ತೋರಿಸಲು ನನಗೆ ಗ್ರಾಮ ಪಂಚಾಯತಿಯವರು ಯಾವುದಾದಾರೂ ದಾಖಲಾತಿಯನ್ನು ನೀಡಿದ್ದಾರಾ ಎಂದರೆ ಇಲ್ಲ. ದಾವಾಸ್ತಿಯು ಪೂರ್ವ ಪಶ್ಚಿಮವಾಗಿ 200 ಅಡಿ ಮತ್ತು ದಕ್ಷಿಣ ಉತ್ತರವಾಗಿ 60 ಅಡಿ ಇದೆ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸುಮಾರು 30-35 ವರ್ಷಗಳ ಹಿಂದೆ ಹೇರಳ ಹಣ ಖರ್ಚು ಮಾಡಿ, ದಾವಾಸ್ತಿಯಲ್ಲಿ ವಾಸದ ಮನೆಯನ್ನು ನಿರ್ಮಿಸಿಕೊಂಡಿದ್ದು ಎಂದು ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ಪಂಚಾಯತಿ ಪರವಾನಿಗೆ ಅಥವಾ ಬಿಲ್ಲುಗಳು ಇವೆಯೇ ಎಂದರೆ ಇಲ್ಲ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾಸ್ತಿಯ ಪಶ್ಚಿಮ ಗಡಿಗೆ ಕೆಲವೊಂದು ವಿಸ್ತೀರ್ಣದ ಜಾಗೆಯನ್ನು ಅತಿಕ್ರಮಿಸಿ ಅಡಿಪಾಯ ನಿರ್ಮಿಸುವ ತಯಾರಿ ನಡೆಸಿದಾಗ ಎಂದು ನೀವು ಬರೆಸಿದ್ದೀರಾ ಎಂದರೆ ಹೌದು. ಪ್ರತಿವಾದಿಯರು ಅಂದಾಜು ಎಷ್ಟು ಅತಿಕ್ರಮಣ ಮಾಡಿರಬಹುದು ಎಂದರೆ , ಸಾಕ್ಷಿಯು ಪೂರ್ವ ಪಶ್ಚಿಮವಾಗಿ ಅಂದಾಜು 150 ಫೂಟ್ ಅತಿಕ್ರಮಣ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಉತ್ತರ ದಕ್ಷಿಣವಾಗಿ ಅತಿಕ್ರಮಣ ಮಾಡಿರುವುದಿಲ್ಲ. ದಾವಾಸ್ತಿಯಲ್ಲಿರುವ ಮನೆಗೆ ಪ್ರತಿವಾದಿಯರು ಬೀಗ ಹಾಕಿರುರುತ್ತಾರೆ ಎಂದು ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುತ್ತೇನೆಯೇ ಎಂದರೆ ಹೌದು. ಯಾವ ದಿನಾಂಕದಂದು ಹೀಗೆ ಬೀಗವನ್ನು ಹಾಕಿರುತ್ತಾರೆ ಎಂದರೆ ನನಗೆ ದಿನಾಂಕ ನೆನಪಿಲ್ಲ, ಆಗ ದೂರನ್ನು ನೀಡಿದ್ದೇವು ಎಂದು ನುಡಿಯುತ್ತಾರೆ. ನಿಪಿ.2 ಪೋಲಿಸರು ನೀಡಿದ ಸ್ವೀಕೃತಿ ಪತ್ರ ಆಗಿರುತ್ತದೆ ಎಂದರೆ ಸರಿ. ನಾನು ಹೇಳಿರುವ ದೂರಿನಲ್ಲಿ ನಮ್ಮ ಅತ್ತಿಗೆಯಾವ ಗಿರಿಜವ್ವ ರವರಿಗೆ ಇರಲು ಬಿಟ್ಟುಕೊಟ್ಟಿರುತ್ತೇನೆ ಎಂದು ಹೇಳಿ ಬರೆಸಿರುತ್ತೇನೆಯೇ ಎಂದರೆ ಹೌದು. ಸಾಕ್ಷಿ ಮುಂದುವರೆದು ಆಕೆ ಅಲ್ಲಿ ಇರುತ್ತಾಳೆ ಮತ್ತು ನಾನು ಹೋಗಿ ಬಂದು ಮಾಡುತ್ತೇನೆ ಎಂದು ನುಡಿಯುತ್ತಾರೆ. ದೂರನ್ನು ನಾನು ನೀಡಿರುತ್ತೇನೆ. ಗಿರಿಜವ್ವ ಪ್ರತಿವಾದಿಯರ ವಿರುದ್ಧ ದೂರನ್ನು ದಾಖಲು ಮಾಡಿರುತ್ತಾಳೆಯೇ ಎಂದರೆ ಇಲ್ಲ, ಆಕೆ ನನಗೆ ಹೇಳಿರುತ್ತಾಳೆ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಸದರಿ ಗಿರಿಜವ್ವ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ಸದರಿ ದೂರಿನ ಅನ್ವಯ ಪೋಲಿಸರು ಯಾವುದಾದರೂ ಕ್ರಮವನ್ನು ಜರುಗಿಸಿರುತ್ತಾರೆಯೇ ಎಂದರೆ , ಸಾಕ್ಷಿಯ ಅದು ಕಂದಾಯ ಇಲಾಖೆಗೆ ಬರುತ್ತದೆ ನೀವು ನ್ಯಾಯಾಲಯಕ್ಕೆ ಹೋಗಿ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ನನಗೆ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಇಲ್ಲ. ದಾವಾಸ್ತಿಯಲ್ಲಿ ನಾನು ಇದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ , ನಾನು ದಾವಾಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಗಿರಿಜವ್ವ ವಾಸ

ಇರುವ ಬಗ್ಗೆ ನನ್ನ ವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ತಿ ನಂಬರ್ -03 ಎಷ್ಟು ವಿಭಾಗವಾಗಿದೆ ಅಥವಾ ಭಾಗಗಳಾಗಿವೆ ಎಂದು ಹೇಳಲು ಬರುತ್ತದೆಯೇ ಎಂದರೆ ಆಸ್ತಿ ನಂಬರ್ 03 1 ನೇ ಪ್ರತಿವಾದಿಗೆ ಸೇರಿದ್ದಾಗಿದ್ದು, ಆಸ್ತಿ ನಂಬರ್ 3/1 ನಮಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ಆಸ್ತಿ ನಂಬರ್ -03 ಈಗ ಅಸ್ತಿತ್ವದಲ್ಲಿದೆಯೇ ಎಂದರೆ ಇರಬಹುದು. ಆಸ್ತಿ ನಂಬರ್ 3/1 ಅಸ್ತಿತ್ವದಲಿಲ್ಲ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ಚರ್ತುಗಡಿಗಳನ್ನು ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರವದಲ್ಲಿ ಸುಳ್ಳು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ದಾಖಲಿಸಲು ನನಗೆ ದಾವಾ ಕಾರಣ ಉದ್ಭವಿಸಿರುವುದಿಲ್ಲ ಮತ್ತು ನಾನು ದಾಖಲಿಸಿದ ದಾವಾಸ್ತಿ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ತಿಯನ್ನು ನಮ್ಮದು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ದಾಖಲು ಮಾಡಿ , ಸುಳ್ಳು ಸಾಕ್ಷಿ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**